ಅ) ಬಂದಿದೆ.

ಆ) ಪ್ರೌಢ ಶಾಲೆಗಳು - 708

ಪದವಿಪೂರ್ವ ಕಾಲೇಜುಗಳು - 808

ದಿನಾಂಕ 4.11.86ರಲ್ಲಿ ಆರ್ಥಿಕ ಮಿತವ್ಯಯ ಆದೇಶ ಜಾರಿಗೆ ಬಂದ ನಂತರ ನೇಮಕಗೊಂಡು ಕೆಲಸ ಮಾಡುತ್ತಿದ್ದಾರೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ವಿಕ್ಟೋರಿಯಾ ಆಸ್ಪತ್ರೆಯ ಹೊರರೋಗಿಗಳಿಗೆ ಚಿಕಿತ್ಸೆ.

380 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ವೈದ್ಯಕೀಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೊರ ರೋಗಿಗಳಿಗೆ ಚಿಕಿತ್ಸೆ ನೀಡಲು ಲಭ್ಯವಿರುವ ಪ್ರೊಫೆಸರ್‌ಗಳು ಎಷ್ಟು?

ಬಿ) ಇವರುಗಳು 1994ನೇ ಸಾಲಿನಿಂದ ಅಪರಾಹ್ನದ ವೇಳೆ ಎಷ್ಟು ಜನರಿಗೆ ಸಲಹೆ ಚಿಕಿತ್ಸೆ ನೀಡಿರುತ್ತಾರೆ? ಪಟ್ಟಿ ನೀಡುವುದು.

ಸಿ) ಇವರುಗಳು ಅಪರಾಹ್ನ ವೇಳೆಯಲ್ಲಿ ಕಾರ್ಯ ನಿರ್ವಹಣೆಯನ್ನು ಎಷ್ಟು ಬಾರಿ ಸರ್ಕಾರದ ಪರಿವೀಕ್ಷಣೆ ನಡೆಸಿದೆ.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಎ) ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೊರ ರೋಗಿಗಳಿಗೆ ಚಿಕಿತ್ಸೆ ನೀಡಲು ಲಭ್ಯವಿರುವ ಪ್ರೋಫೆಸರುಗಳ ಸಂಖ್ಯೆ 25.

ಬಿ) ಪಟ್ಟಿ ಲಗತ್ತಿಸಿದೆ. ಅನುಬಂಧ-1.

ಸಿ) ಹೊರ ರೋಗಿಗಳ ವಿಭಾಗದ ಮೇಲ್ವಿಚಾರಣೆಗೆಂದು ಒಬ್ಬ ಆಡಳಿತಾಧಿಕಾರಿಯನ್ನು ಜಿಲ್ಲಾ ಸರ್ಜನ್ ಗ್ರೇಡ್ ನೇಮಿಸಲಾಗಿದೆ. ಇವರು ಪ್ರತಿನಿತ್ಯವು ಹೊರ ರೋಗಿ ವಿಭಾಗದ ಪರಿವೀಕ್ಷಣೆಯನ್ನು ಪೂರ್ವಾಹ್ನ ಮತ್ತು ಅಪರಾಹ್ನ ನಡೆಸುವರು.

ಸ್ಥಾನೀಯ ವೈದ್ಯಾಧಿಕಾರಿಯವರು ಪ್ರತಿ ದಿನವು ಹೊರ ರೋಗಿ ವಿಭಾಗಕ್ಕೆ ಭೇಟಿ ನೀಡುತ್ತಾರೆ.

ಅಧೀಕ್ಷಕರು ಆಗಿಂದಾಗ್ಗೆ ಹಾಗೂ ಪ್ರತಿ ಬುಧವಾರ ನೈರ್ಮಲ್ಯ ಪರಿಶೀಲನೆ ಮಾಡುತ್ತಾರೆ. ವೈದ್ಯಕೀಯ ನಿರ್ದೇಶಕರು ಆಸ್ಪತ್ರೆಗೆ ಆಗಾಗ್ಗೆ ಅನಿರೀಕ್ಷಿತ ಭೇಟಿ ನೀಡಿ ಪರಿವೀಕ್ಷಿಸುತ್ತಾರೆ. ಹಾಗೂ ನಿರ್ದೇಶಕರು ರಚಿಸಿರುವ ಸಮಿತಿ ಸದಸ್ಯರುಗಳಾದ ಮುಖ್ಯ ಆಡಳಿತಾಧಿಕಾರಿಯವರು ಹಾಗೂ ಉಪ ನಿರ್ದೇಶಕರು (ವೈ.ಶಿ.) ಆಗಿಂದಾಗ್ಗೆ ಆಸ್ಪತ್ರೆಗೆ ಭೇಟಿ ಪರಿಶೀಲಿಸುತ್ತಿದ್ದಾರೆ.

ಅನುಬಂಧ-1

1994ನೇ ಇಸವಿಯಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ವಿವರ.

			ಹೊಸ ಹೊರ ರೋಗಿಗಳ ಚಿಕಿತ್ಸೆ ಪಡೆದ ವಿವರ	ಹಳೆ ಹೊರ ರೋಗಿಗಳ ಚಿಕಿತ್ಸೆ ಪಡೆದ ವಿವರ
ಜನವರಿ	1994	ಪೂರ್ವಾಹ್ನ	13923	6284
		ಅಪರಾಹ್ನ	9282	4189
ಫೆಬ್ರುವರಿ	1994	ಪೂರ್ವಾಹ್ನ	14701	5928
		ಅಪರಾಹ್ನ	9801	3952
ಮಾರ್ಚ	1994	ಪೂರ್ವಾಹ್ನ	15735	6241
		ಅಪರಾಹ್ನ	10490	4161
ಏಪ್ರಿಲ್	1994	ಪೂರ್ವಾಹ್ನ	13888	6832
		ಅಪರಾಹ್ನ	9259	4554
ಮೇ	1994	ಪೂರ್ವಾಹ್ನ	16878	7051
		ಅಪರಾಹ್ನ	11252	4701
ಜೂನ್	1994	ಪೂರ್ವಾಹ್ನ	15382	6450
		ಅಪರಾಹ್ನ	10255	4300
ಜುಲೈ	1994	ಪೂರ್ವಾಹ್ನ	16403	6259
		ಅಪರಾಹ್ನ	10935	4173
ಅಗಸ್ಟ	1994	ಪೂರ್ವಾಹ್ನ	16403	6259
		ಅಪರಾಹ್ನ	10935	4173
ಸೆಪ್ಟಂಬರ್	1994	ಪೂರ್ವಾಹ್ನ	14890	5836
		ಅಪರಾಹ್ನ	9925	3890
ಅಕ್ಟೋಬರ್	1994	ಪೂರ್ವಾಹ್ನ	14884	5394
		ಅಪರಾಹ್ನ	9556	3596

ನವೆಂಬರ್ 1994	ಪೂರ್ವಾಹ್ನ	14740	3983
	ಅಪರಾಹ್ನ	9826	3989
ಡಿಸೆಂಬರ್ 1994	ಪೂರ್ವಾಹ್ನ	15374	6527
	ಅಪರಾಹ್ನ	10249	4351

ಒಟ್ಟು 1994ನೇ ಇಸವಿಯಲ್ಲಿ ಹೊಸ ಮತ್ತು ಹಳೆ ರೋಗಿಗಳ ಚಿಕಿತ್ಸೆ ಪಡೆದ ವಿವರ.

ಹೊಸ ಹೊರ ರೋಗಿ		*ಹಳೆ ಹೊರ ರೋಗಿ*	
ಪೂರ್ವಾಹ್ನ	1,82,655	ಪೂರ್ವಾಹ್ನ	1,04,029
ಅಪರಾಹ್ನ	1,21,770	ಅಪರಾಹ್ನ	69,352
	2,04,425		1,73,381

1995ನೇ ಇಸವಿಯಲ್ಲಿ ಹೊಸ ಹೊರ ರೋಗಿ ಮತ್ತು ಹಳೆ ಹೊರ ರೋಗಿಗಳ ಚಿಕಿತ್ಸೆ ಪಡೆದ ವಿವರ. (ಜೂನ್ ತಿಂಗಳ ವರೆಗೆ)

		ಹೊಸ ಹೊರ ರೋಗಿ	ಹಳೆ ಹೊರ ರೋಗಿ
ಜನವರಿ 95	ಪೂರ್ವಾಹ್ನ	14884	6093
	ಅಪರಾಹ್ನ	9923	4062
ಫೆಬ್ರವರಿ 95	ಪೂರ್ವಾಹ್ನ	16403	6259
	ಅಪರಾಹ್ನ	10935	4173
ಮಾರ್ಚ 95	ಪೂರ್ವಾಹ್ನ	14352	5557
	ಅಪರಾಹ್ನ	9568	3705
ಏಪ್ರಿಲ್ 95	ಪೂರ್ವಾಹ್ನ	15132	5931
	ಅಪರಾಹ್ನ	10088	3954
ಮೇ 95	ಪೂರ್ವಾಹ್ನ	16450	6495
	ಅಪರಾಹ್ನ	10967	4330

ಜೂನ್	95	ಪೂರ್ವಾಹ್ನ	16301	6116
		ಅಪರಾಹ್ನ	10687	4077

ಒಟ್ಟು ಹೊಸ ರೋಗಿ ಮತ್ತು ಹಳೆ ರೋಗಿ 1995ನೇ ಇಸವಿ ಜೂನ್ 1995ರ ವರೆಗೂ ಹೊರರೋಗಿಗಳಿಗಾಗಿ ಚಿಕಿತ್ಸೆ ಪಡೆದ ವಿವರಗಳು.

ಹೊಸ ಹೊರ ರೋಗಿ		*ಹಳೆ ಹೊರ ರೋಗಿ*	
ಪೂರ್ವಾಹ್ನ	93,255	ಪೂರ್ವಾಹ್ನ	35,853
ಅಪರಾಹ್ನ	62,170	ಅಪರಾಹ್ನ	23,902
ಒಟ್ಟು	**1,55,425**		**59,755**

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ

381 - ಶ್ರೀ ಬಸವನಗೌಡ ಪಾಟೀಲ್ (ಬಿಜಾಪುರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರಕಾರವು ಈಗಾಗಲೇ ಘೋಷಿಸಿರುವಂತೆ ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ವಿಳಂಬವಾಗುತ್ತಿರುವ ವಿಷಯ ನಿಜವೇ.

ಆ) ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ಸರಕಾರವು ಹಾಕಿಕೊಂಡಿರುವ ನಿಯಮಗಳೇನು.

ಇ) ಸರಕಾರವು ಪ್ರಥಮ ಹಂತದಲ್ಲಿ 9,000 ಶಿಕ್ಷಕರನ್ನು ಕೇವಲ ವಯೋಮಿತಿ ಮೀರಿದವರನ್ನು ನೇಮಕಾತಿ ಮಾಡಿಕೊಳ್ಳುವುದೆಂಬುದಾಗಿ ಹಾಗೂ 2 ಹಂತದಲ್ಲಿ ಉಳಿದವರನ್ನು ಮೆರಿಟ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದೆಂಬುದಾಗಿ ಸರಕಾರದವರು ನಿರ್ಧಿಸಿರುವರೆ.

ಈ) ಹಾಗಿದ್ದಲ್ಲಿ, ಈ ನೇಮಕಾತಿಯು ತಾರತಮ್ಯ ಉಂಟುಮಾಡುವಂತಾಗುವುದಿಲ್ಲವೇ.

ಉ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರಕಾರದವರು ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ದಿನಾಂಕ 31-5-95ರ ಅಂತ್ಯಕ್ಕೆ ಖಾಲಿಯಿರುವ 18,700 ಶಿಕ್ಷಕರ ಹುದ್ದೆಗಳ ಪೈಕಿ.50ರಷ್ಟನ್ನು ವಿಶೇಷ ನೇಮಕಾತಿ (29 ವರ್ಷ ವಯೋಮಿತಿ ಮೀರಿದವರಿಂದ) ಮತ್ತು ಉಳಿದ ಶೇ.50ರಷ್ಟನ್ನು ಸಾಮಾನ್ಯ ನೇಮಕಾತಿ ಮೂಲಕ ತುಂಬಲಾಗುತ್ತಿದೆ.

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಆಯಾ ಜಿಲ್ಲಾ ಉಪ ನಿರ್ದೇಶಕರು ಪಡೆದು, ಅರ್ಹತೆ ಹಾಗೂ ಮೀಸಲಾತಿ ನಿಯಮದಂತೆ ನೇಮಕ ಮಾಡಲಾಗುವುದು.